(682)

ವಾರದ್ಪತ್ರಿಕೆ SATYAVADI Daily & Weekly
Oldest Newspaperof Mysore Reg No. M 1299

ಸತ್ಯವಾದಿ

ಸಂಪುಟ 26 ಸಂಚಿಕೆ 141 | ಶನಿವಾರ 10—4—1943 | ಕ್ರಿ

ವಿವಿಧ ವಿಷಯ

ಕಾಂಗ್ರೆಸ್ ಅಧ್ಯಕ್ಷರಾದ ಮೌಲಾನಾ ಅಬ್ದುಲ್ ಕಲಾಂ ರವರ ಪತ್ನಿ ಬೇಗಂ ರವರು ಕ್ಷಯರೋಗದಿಂದ ನರಳಿ ದ್ವರಿಷ್ಟೆ. ಅವರು ಕಲ್ಕತ್ತಾದಲ್ಲಿ ಕಾಲವಾದರು.

ನ್ಯೂಜೆಲೆಂಡ್ ಮಂತ್ರಿಯು ಜಪಾನೀಯರ ಜಯಪ್ರದವು ನಿಂತಿತು. ನಾವು ಹೆಚ್ಚು ಶಕ್ತಿಯಿಂದ ಶತ್ರುವನ್ನು ಸೋಲಿಸ ಬೇಕೆಂದರು.

ಇಟಲಿಯ ರಾಜಧಾನಿಯನ್ನು ರೋಂನಿಂದ ಬಪಲಾಯಿಸಲು ಮುಸಲೋನಿಯು ಯೋಚಿಸುತ್ತಿರುವನಂತೆ.

ಟ್ಯುನಿಷಿಯಾದಲ್ಲಿ ಗ್ರೈಯಿವನ್ನು ಮಿತ್ರ ಪಕ್ಷದವರು ಆಕ್ರಮಿಸಿರುವುದು. ಇಲ್ಲಿಂದ ಸಫಿಕ್ಸ್ ಬರೇ 30 ಮೈಲಿ.

ನಿನ್ನೆ ಮದರಾಸಿನಿಂದ ಹೊರಟ ಮೇಲು ಟ್ರೇನು ವೈಪ್ ಫೀಲ್ಡ್ ಬಳಿ ಕಂಬಿ ತಪ್ಪಿ 3—4 ಗಾಡಿಗಳು ಮೊಗಚಿಕೊಂಡವು. ಮೈಸೂರಿಗೆ ಬರಬೇಕಾದ ವರ್ತಮಾನ ಪತ್ರಿಕೆಗಳು ನಿನ್ನೆ ರಾತ್ರಿ ಬಂದವು.

ಬಸರ್ಟ್ ರೇವು ಪಟ್ಟಣವು ಸಾವಾನ್ಯನಿಂದ ತಿಳಿಯಬೇಡಿ. ಇಲ್ಲಿ ಮೆಡಟರೇನಿಯನ್ ಸಮುದ್ರದಲ್ಲಿರುವ ಬ್ರಿಟಿಷ್ ಫ್ರೆಂಚ್ ಎಲ್ಲಾ ನೌಕೆಗಳು ಇಲ್ಲಿ ತಂಗಲು ಸ್ಥಳವಿದೆ

ಕುಂಭಕೋಣದಲ್ಲಿ ಈ ವರ್ಷ ತಿಂಗಳಿಂದ ಸಕ್ಕರೆಯು ಅಂಗಡಿಗಳಲ್ಲಿ ಸಿಗುತ್ತಿಲ್ಲ. ರೇಷನಿಂಗ್ ಪದ್ಧತಿ ಜಾರಿಯಲ್ಲಿದೆ. ಏನಾದರೇನು ?

ಡೆಲ್ಲಿ ಬಾತ್ಮಿದಾರರು ಲಂಡನ್ ಡೈಲಿ ಪತ್ರಿಕೆಗೆ ಗಾಂಧಿಜಿಯವರು ಮತ್ತೆ ಉಪವಾಸವನ್ನು ಮಾಡುವರೆಂದೂ ಈ ಸಲ ಸಾಯುವವರೆಗೆ ಉಪವಾಸ ವೆಂದೂ ಬರೆದಿರುವರು. ಲಂಡನ್ನಿನಲ್ಲಿ ಇವನ್ನು ನಂಬುವುದಿಲ್ಲ.

ನಿರಾಶ್ರಿತರಿಗೆ ಎಲ್ಲಿಲ್ಲಿ ಎಷ್ಟು ಮಂದಿಗೆ ಆಶ್ರಯಕೊಟ್ಟಿರುವರೆಂದು ವಿ || ಚರ್ಚಿಲರವರು ಹೇಳಿರುವರು. ಇಂಗ್ಲೆಂಡ್ 6300, ಜಮೈಕಾ 3000 ಸೈಪ್ರೆಸ್ 5000 ಪೂರ್ವ ಆಫ್ರಿಕಾ 9000 ಪ್ಯಾಲೆಸ್ತೀನ್ 38000 ಯಹೂದ್ಯರು ಇಂಡಿಯಾದಲ್ಲಿ 40 ಸಾವಿರ ಇಂಡಿಯಾದಲ್ಲಿ 3 ಸಾವಿರ ಪೋಲಿಷ್ ಮಕ್ಕಳನ್ನು ಕಾಪಾಡುತ್ತಿರುವರು ಅಲ್ಲದೆ 5 ಸಾವಿರ ದೊಡ್ಡವರನ್ನೂ 5 ಸಾವಿರ ಮಕ್ಕಳನ್ನು ಪೋಷಿಸಲು ಏರ್ಪಾಡಾಗಿರುವುದು. ಒಟ್ಟಿನಲ್ಲಿ ಆಂಗ್ಲೇಯರು 7 ಲಕ್ಷ ನಿರಾಶ್ರಿತರನ್ನು ಕಾಪಾಡಿದರು.

ವಿ॥ ರೂಸ್‌ವೆಲ್ಟರು ಆಹಾರ ಪದಾರ್ಥಗಳ ಬೆಲೆಯನ್ನು ಒಂದು ಹದಕ್ಕೆ ತಂದಿರುವರು. ಅಮೆರಿಕಾದಲ್ಲಿ ಕೆಲಸಗಾರರು ಒಂದು ಕೆಲಸದಿಂದ ಎರಡೆ ತ್ತೊಂದು ಕೆಲಸಕ್ಕೆ ಸೇರದ ಹಾಗೆ ಮಾಡಿರುವರು.

ವಿವಿಧ ವರ್ತಮಾನ

ಬರ್ಮಾ ಮುಂತಾದ ರಾಜ್ಯಗಳಿಂದ ಓಡಿಬಂದ ಹಿಂದೂಸ್ಥಾನದವರಪೈಕಿ ಇದುವರೆಗೂ ಯಾವ ಕೆಲಸವೂ ಸಿಕ್ಕದಿರುವವರಿಗೆ ಇಂಡಿಯಾ ಸರಕಾರವು ಯಾವ ರೀತಿ ಸಹಾಯ ಮಾಡಬೇಕೆಂದು ಯೋಚಿಸುತ್ತಿರುವುದು.

ಈಗ ಹಿಂದೂಸ್ತಾನಕ್ಕೆ ಓಡಿಬಂದ ನಿರಾಶ್ರಿತರು 4000 ಮಂದಿಗಿಂತ ಹೆಚ್ಚಾಗಿಯೇ ಸರ್ಕಾರಿ ಕೆಲಸದಲ್ಲಿರುವರು.

ಹೈದರಾಬಾದು ನೈಜಾಮರು ರೆಡ್ ಕ್ರಾಸ್ ಮುಂತಾದ ಸಂಸ್ಥೆಗಳಿಗೆ ಮತ್ತೆ ಒಂದು ಲಕ್ಷ ರೂಪಾಯಿ ದಾನ ಮಾಡಿರುತ್ತಾರೆ.

ಈಜೆಗಾದ ಬರ್ಲಿನ್ ಧಾಳಿಯಿಂದ ಕ್ರಿಪ್ಸ್ ಕಾರ್ಖಾನೆಯನ್ನು 10 ದಿವಸ ಮುಚ್ಚಬೇಕಾಯಿತು.

ಬಿಜಾಪುರದಲ್ಲಿ ವೀರಕ್ಷಾಮ ಸ್ವಾಸ್ಥ್ಯವಾಗಿದ್ದು ಕ್ಷಾಮ ನಿವಾರಣಾರ್ಥವಾಗಿ ಶೇಖರಿಸುತ್ತಿರುವ ನಿಧಿಗೆ ಇದುವರೆಗೆ ರೂ. 11300 ದೊರೆತಿದೆ.

ಇಂಗ್ಲೆಂಡಿನಲ್ಲಿರುವ ಹಿಂದೂಸ್ಥಾನದವರಾದ, ಬಂಗಾಳಾ ಪ್ರಾಂತದವರಿಗೆ ಸಹಾಯಮಾಡಲು ವಸೂಲಾದ 5 ಲಕ್ಷ ರೂಪಾಯಿಯನ್ನು ಬಂಗಾಳಾ ಗ್ವರ್ನರಿಗೆ ಸರ್ ಆಜೀಜ್ ಉಲ್ ಹಕ್ಕರು ಕೊಟ್ಟರು.

ಮುಸೋಲಿನಿಯು ತನ್ನ ರಾಜ್ಯವನ್ನು ಎಲ್ಲಿ ಮಿತ್ರಪರೋ ಎಂದು, ತನಗೆ ಪೆಚ್ಚಾಗಿ ಸೈನ್ಯ, ವಿಮಾನ, ಆಂಟಿ ಏರ್ ಗನ್ ಇವುಗಳನ್ನು ಕಳುಹಿಸಬೇಕೆಂದು ಕೇಳಿದ್ದಕ್ಕೆ ರಿಪಬ್ಲಿಸ್ಟಾಪರೋಂಗೆ ಒಂದಿರವುದ. ಮಾತ ಕತೆ ನಡೆಯುತ್ತಿರುವುದು.

ಮೈಸೂರು ಪೌರ ಸಭೆಯವರು ಕಳೆದ 31 ನೇ ತಾರೀಖು ನಡೆಸಿದ ಮನೆ ಟಿಂಗಿನಲ್ಲಿ ಮೋಟರ್ ಹಾಕಿವ ಸಂಬಂಧದ ತರಾವು ವಿಚಾರ ವನ್ನು ಪರಿಶೀಲಿಸಲು ವಿಶೇಷ ಮೀಟಿಂಗು ನಡೆಸಬೇಕೆಂದು ಕೋರಿ ಕೆಲವು ವಂತಿದಾರರು ಅಧ್ಯಕ್ಷರಿಗೆ ಅರ್ಜಿ ಕೊಟ್ಟಿರೆಂಬುದಾಗಿ ತಿಳಿಯಬಂದಿದೆ.

ಸಿಂಧ್ ಹೈದರಾಬಾದಿನಲ್ಲಿ ಒಂದು ವಿಧ ಜನರರವ . ಇವರನ್ನು ಬುಡ್ಡರೆಂದು ಕರೆಯುತ್ತಾರೆ. ಈ ಜಾಗಗಳಿಗೆ ಹಬ್ಬ ಹುಟ್ಟುವುದಿಲ್ಲ. ಇವರಿಗೆ ಸೆಕೆಯೆಂದರಾಗುವುದಿಲ್ಲ. ಬೇ ಗೆಯಲ್ಲಿ ಒದ್ದೆ ಒಟ್ಟಿಗಳನ್ನು ತಲೆಯ ಮೇಲೆ ಹಾಕಿಕೊಂಡು ಓಡಾಡುವರು

ಸರ್ ಮಾರಿಸ್ ಗ್ವೆಯರ್ ಫೆಡರಲ್ ಕೋರ್ಟಿನ ಜಡ್ಜರು ಏಪ್ರಿಲ್ 25 ಕ್ಕೆ 65 ವರ್ಷವಾಗುವುದರಿಂದ ರಿಟೈರಾಗುವರು ಇನ್ನು ಮುಂದೆ ಅವರು ದೆಹಲಿ ವಿಶ್ವವಿದ್ಯಾನಿಲಯದ ಕಡೆ ಪೂರ್ಣ ಗಮನಕೊಡುವರು.

ಅಮೆರಿಕಾದಲ್ಲಿ ಇಂಡಿಯಾ ವಿಷಯದಲ್ಲಿ ಎಲ್ಲರೂ ಆಸಕ್ತಿಯಾಗಿರುವರೆಂದೂ ವರ್ತಮಾನ ಪತ್ರಿಕೆಗಾರರೂ, ರೇಡಿಯೋ ವ್ಯಾಖ್ಯಾನಗಾರರೂ ಪ್ರಸಂಗಿಗಳೂ ಎಲ್ಲರೂ ಇಂಡಿಯಾ ವಿಷಯದಲ್ಲಿ ಪ್ರಶ್ನೆ ಕೇಳುತ್ತಿದ್ದರೆಂದು ಅಂಥೋನಿ ಈಡನ್‌ರನ್ನು ಲಂಡನ್ನಿನಲ್ಲಿ ಹೇಳಿದರು.

ಅಕ್ಕರ ಸಾವಾಜಿಕ
ಭಾವಪರಿಪೂರ್ಣವಾದ ಕಥೆ
ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಪುಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು
ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್ ಮೈಸೂರು
ಶ್ರೀ ರಾಮಚಂದ್ರ ಬುಕ್ ಡಿಪೋ
ದೇವರಾಜ ಮಾರ್ಕಟ್, ಮೈಸೂರು

ಶ್ರೀ 'ಓಂ' ಬ್ರಾಂಡ್ ಕೇಸರಿ ಈ "ಓಂ" ಗುರ್ತಿನ ಕೇಸರಿಯು ಅತ್ಯಂತ ಪರಿಶುದ್ಧವಾದುದು. ಇದರಲ್ಲಿ ಯಾವ ಅಕ್ಷೇಪಕರವಾದ ಪದಾರ್ಥವೂ ಸೇರಿಲ್ಲ ; ಮತ್ತು ಶಾಸ್ತ್ರೀಯವಾಗಿ ಪರಿಶುದ್ಧವಾದುದು. ದೇವಸ್ಥಾನಗಳಲ್ಲಿಯೂ ದೇವರ ಪೂಜೆಗೂ, ಔಷಧಿಗಳಿಗೂ ತಿಂಡಿ ಪದಾರ್ಥಗಳಿಗೂ ಸುಖ ಸಂತೋಷಕಾಲದಲ್ಲೂ ಉಪಯೋಗಿಸಲ್ಪಡಲು ಅರ್ಹವಾಗಿದೆ.

ಅತ್ಯಂತ ಪರಿಶುದ್ಧವಾದುದೆಂದು ಗ್ಯಾರಂಟಿ ಹೊಂದಿದೆ.

ವಲ್ಲಭದಾಸ್ ತೇಜಪಾಲ್
೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಜಿ. ಟಿ. ಮದರಾಸು

ರಷ್ಯಾದ ಸ್ತ್ರೀಯರು

ಪ್ರಪಂಚದಲ್ಲಿ ಸ್ತ್ರೀಯರಿಗೆ ಹೆಚ್ಚು ಸ್ವತಂತ್ರವಿರುವ ದೇಶವು ರಷಾ ದೇಶವು. ರಷಾ ದೇಶದಲ್ಲಿ ಸ್ತ್ರೀಯರಿಗೆ ಪುರುಷರಿಗಿರುವಷ್ಟು ಸ್ವಾತಂತ್ರ್ಯವುಂಟು ಅಂದರೆ ಗಂಡಸರು ಮಾಡುವ ಕೆಲಸವನ್ನು ಸ್ತ್ರೀಯರಿಗೂ ಕೊಡುವರು. ಸಷ್ಯಾದಲ್ಲಿ ದೊಡ್ಡ ದೊಡ್ಡ ಕೆಲಸದಲ್ಲಿ 1700 ಸ್ತ್ರೀಯರು ಉದ್ಯೋಗದಲ್ಲಿರುವರು. ಮುನಿಸಿಪಲ್ ಇಲಾಖೆಯಲ್ಲಿ ಐದು ಲಕ್ಷಕ್ಕಿಂತ ಹೆಚ್ಚು ಮಂದಿ ಸ್ತ್ರೀಯರು ಕೆಲಸದಲ್ಲಿರುವರು. ಕಾರ್ಖಾನೆಗಳಲ್ಲಿ 90 ಲಕ್ಷ ಮಂದಿ ಉದ್ಯೋಗದಲ್ಲಿರುವರು ವಿದ್ಯಾ ಇಲಾಖೆಯಲ್ಲಿಯೂ ಇಂಜಿನಿಯರ್ ಇಲಾಖೆಯಲ್ಲಿಯೂ ಸಾವಿರಾರು ಸ್ತ್ರೀಯರು ಕೆಲಸಮಾಡುವರು. ಇಪ್ಪತ್ತು ವರುಷದ ಹಿಂದೆ ರಷ್ಯಾ ಸ್ತ್ರೀಯರು ಗಂಡಸಿನೊಡನೆ ಸೇರುವುದು ಈ ದೇಶದ ಹಾಗೆ ನಿಶೇದಿಸಿದ್ದರು. ಹೆಂಗಸರು ಮುಸುಕನ್ನು ಹಾಕಿಕೊಂಡು ಬೀದಿಯಲ್ಲಿ ಓಡಾಡುತ್ತಿದ್ದರು. ತಾತಾ ಪಿತ್ರಗಳು ತಮ್ಮ ಹೆಣ್ಣು ಮಕ್ಕಳನ್ನು ತಮಗೆ ಇಷ್ಟ ಬಂದವರಿಗೆ ಕೊಟ್ಟು ಮದುವೆ ಮಾಡಿ ಕೊಡುತ್ತಿದ್ದರು. ಈಗ ಇದೆಲ್ಲಾ ತಪ್ಪಿದೆ. ಈಗಿನ ಯುದ್ಧವು ಪ್ರಾರಂಭವಾದ ಮೇಲೆ ಸ್ತ್ರೀಯರು ಗಂಡಸಿನೊಡನೆ ತಾವೂ ಬಂದೂಕ ಹಿಡಿದು ಯುದ್ಧ ಮಾಡುವರು. ಯುದ್ಧದಲ್ಲಿ ಗಾಯಗೊಂಡವರನ್ನು ಎತ್ತಿಕೊಂಡು ಬಂದು ಆಸ್ಪತ್ರೆಗಳಲ್ಲಿ ಇಲಾಜುಮಾಡುವರು. ಲಕ್ಷಾಂತರ ಸ್ತ್ರೀಯರು ತಮ್ಮ ಯಜಮಾನರನ್ನೂ, ತಂದೆಯಂದಿರನ್ನೂ ಸಹೋದರರನ್ನೂ ಯುದ್ಧಕ್ಕೆ ಹೋಗಿರೆಂದು ಪ್ರೋತ್ಸಾಹಿಸಿ ಮನೆಯ ಕೆಲಸಗಳನ್ನು ತಾನೇ ನೋಡಿಕೊಳ್ಳುವರು. ಇವಲ್ಲದೆ ಕಾರ್ಖಾನೆಗಳಲ್ಲಿಯೂ, ಗಣಿಗಳಲ್ಲಿಯೂ ರೈಲ್ವೆ ಎಂಜಿನ್ ನಡೆಸುವುದರಲ್ಲಿಯೂ ನಾಕೆ ನಡೆಸುವುದರಲ್ಲಿಯೂ; ಮೋಟಾರ್‌ನಿಂದ ಭೂಮಿ ಉಳುವ ಯಂತ್ರಗಳನ್ನು ನಡೆಸುವವರು ಇವರೇ.

ಸೈನ್ಯಕ್ಕೆ ಬೇಕಾಗುವ ಒಟ್ಟೆಗಳನ್ನು ಹೊಲೆದು ಗಾಯಗೊಂಡಿರುವವರಿಗೆ ತಮ್ಮ ರಕ್ತವನ್ನು ಕೊಡುವರು. ಸಭಾಸ್ವಪ್ನೋಲಿನಲ್ಲಿ ಒಬ್ಬಳೇ 300 ಮಂದಿ ಜರ್ಮನರನ್ನು ಕೊಂದಿರುವಳು. ಅಲ್ಲೇ ಮತ್ತೊಬ್ಬಳು ರಣರಂಗದಲ್ಲಿ ಗಾಯಗೊಂಡ 21 ಜನರನ್ನು ಹೊತ್ತುಕೊಂಡು ಬಂದು ಆಸ್ಪತ್ರೆಯಲ್ಲಿ ಇಲಾಜುಮಾಡಿದಳು. ವಿಮಾನ ನಡೆಸುವುದರಲ್ಲಿ ಗಂಡಸರಿಗಿಂತ ಹೆಂಗಸರಿಗೆ ಆಸಕ್ತಿ ಹೆಚ್ಚು. ಸಾವಿರಾರು ಅಲ್ಲ ಲಕ್ಷಾಂತರ ಸ್ತ್ರೀ ವೈಮಾನಿಕರು ಈ ಯುದ್ಧದಲ್ಲಿ ಕೆಲಸ ಮಾಡುತ್ತಿರುವರು. ಒಬ್ಬ 19 ವರ್ಷದ ತರುಣಿಯ ಕಥೆಯನ್ನು ಕೇಳಿ. ಈಕೆಯ ಸಾಹಸವನ್ನು ಜರ್ಮನಿಯರು ನೋಡಿ ಸಹಿಸಲಾರದೆ ಇವಳನ್ನು ಬಹಳ ದಿವಸದಿಂದು ಪತ್ತೆಹಚ್ಚಿಸುತ್ತಿದ್ದರು. ಇವಳು ಸುಲಗಿದಾಗ ಕೂದಲು ಹಿಡಿದು ದರದರನೆ ಎಳೆದರು. ಮುಖದ ಮೇಲೆ ಉಗುಳಿದರು. ಗಲ್ಲಿಗೆ ಹಾಕುವ ಸ್ಥಳದವರೆಗೂ ಎಳೆದುಕೊಂಡುಹೋಗಿ ಅವಳ ಬರಡು ಕಿವಿಗಳನ್ನು ಕತ್ತರಿಸಿದರು. ನಂತರ ಶೂರ್ಪಣಕಿಯನ್ನಾಮಾಡಿ ಕೊಂದರು. ಈಕೆಯ ಪ್ರಾಣ ಬಿಡುವಾಗ. ಮಿತ್ರರೇ ಜರ್ಮನರು ನನ್ನನ್ನು ಕೊಲ್ಲಲು ಜಗಲ್ಲಿ ಸೇಡನ್ನು ತೀರಿಸಿಕೊಳ್ಳಿ ಎಂದು ಹೇಳಿ ಜರ್ಮನಿಯರು ಸಿದ್ಧಮಾಡಿದ್ದ ಬಿಕಿಯಲ್ಲಿ ಧುಮುಕಿದಳು. ಬಿಂಕಿಯು ಹತ್ತಿಕೊಂಡು ಉರಿಯತ್ತಿದ್ದಾಗ " ಸ್ವದೇಶಕ್ಕಾಗಿ ನಾನು ಸಾಯುತ್ತಿದ್ದೇನೆ ರಷ್ಯಾವಿಗೆ ಜಯವಾಗಲಿ " ಎಂದು ಹೇಳಿ ಪ್ರಾಣಬಿಟ್ಟಳು. ಇದನ್ನು ನೋಡಿದ ರಷ್ಯಾದ ಸ್ತ್ರೀಯರಿಗೆಲ್ಲಾ ಸೆಡುತೀರಿಸಿಕೊಳ್ಳಬೇಕೆಂಬ ನಿಶ್ಚಯ ಸಿರುವರು. ಹೋದವರ್ಷ ಒಂದು ಲಕ್ಷದ ಐವತ್ತೈದು ಸಾವಿರ ವಿಮಾನ ನೇಗಿಲನ್ನು ಉಳುವ ಕೆಲಸದಲ್ಲಿ ಸಂತೆ ಕಟ್ಟಿದ್ದರು. ಇವರಲ್ಲಿ ಮೊಲನೆ ಒಹ ಮಾನವು ಒಬ್ಬ ಸ್ತ್ರೀಗೆ ಒಂಟು ಇವಳು 12.6 ಎಕರೆಗಳನ್ನು ಉತ್ತಳು. ಹಿಂದೆ ಇಷ್ಟೇ ಕಾಲದಲ್ಲಿ 487 ಎಕೆರೆಗಿಂತ ಹೆಚ್ಚಾಗಿ ಯಾರೂ ಉತ್ತಿಲ್ಲ. ರಷ್ಯಾದ ಹೆಗಸರು ತಾವು ರಾಜ್ಯಭಾರದಲ್ಲಿ ಹಿಂದು ಭಾಗ ವಹಿಸಿದ್ದೇವೆಂದು ಹೆಮ್ಮೆಪಡುವರು.

....ಮೈಸೂರಿನ ಹೊಸ ಸಚಿವರು....

ಮೈಸೂರಿನ ಸಚಿವರು ಇಂಡಿಯಾ ಸರ್ಕಾರದ ಡೆಪ್ಯುಟೀಫ್ ಕಂಟ್ರೋಲರ್ ಆಫ್ ಪ್ರೈಸೆಸ್‌ನವರಾದ ಮಾ|| ಎಂ. ಶ್ರೀನಿವಾಸರಾವರು ಮೈಸೂರು ಸರ್ಕಾರದ ಸಚಿವರಾಗಿ ನಿಯಮಿಸಲ್ಪಟ್ಟಿರುವರು, ಮತ್ತು ಮೈಸೂರು ಸರ್ಕಾರದ ಚೀಫ್ ಸೆಕ್ರೆಟರಿ ಮಾ|| ಅಕ್ಕಾಜಿಗೌಡರು ಒಂದು ವರ್ಷಕಾಲ ಹೆಚ್ಚಿಗೆ ಸಚಿವರಾಗಿ ನಿಯಮಿಸಲಾಗಿರುವರು.

ಈ ವಾರದ ಭವಿಷ್ಯ

ಕೃಷ್ಣಾಪುರದ ವೆಂಕಟನರಸಿಂಹಾಚಾರ್
ಶ್ರೀ ರಾಮಕೃಷ್ಣ ಜ್ಯೋತಿಷಾಲಯ.

ಮೇಷ

ನಿಮಗೆ ಕಾರ್ಯ ನಿಧಾನತೆಯಿಂದ ಕೋಪಾಧಿಕ ಇಷ್ಟಬಂಧು ಮಿತ್ರ ವಿರೋಧ ರಾಜಕೀ ಜನರಿಂದ ಅಸೌಖ್ಯತೆ ವ್ಯಯಾಧಿಕ ನೀಚಾಶ್ರಯ ಶ್ರೀ ರಾಮಾರ್ಚನೆ ಮಾಡಿಸಿ ತಾ|| 13, 14 ಅನಾರೋಗ್ಯತೆ ಕೋಪಾಧಿಕ್ಯ.

ವೃಷಭ

ಕಾರ್ಯ ಕೈಗೂಡುವುದು ಬಂಧು ಮಿತ್ರಾದಿ ಸಂದರ್ಶನ ಸುಂದರ್ಶನ ವಾಕ್ಚಾತುರ್ಯ ಸ್ತ್ರೀ ಪುತ್ರ ಸೌಖ್ಯ ವಿದ್ಯಾಭಿವೃದ್ಧಿ. ತಾ|| 15 16 ಫಲ ಕಡಿಮೆ ನಿಷ್ಠೂರ ಭಾಷಣ ವ್ಯಯಾಧಿಕ ಆದಿತ್ಯಹೃದಯ ಪಾರಾಯಣಮಾಡಿ ರಾಮ ದೇವರಿಗೆ ಹೂವ್ವ ಸಮರ್ಪಿಸಿ ಶುಭ.

ಮಿಥುನ

ನಮಗೆ ಶತ್ರುಗಳು ಮುಂದಾಗಿದ್ದರೂ ಲಾಭಾಧಿಕವಿರುತ್ತೆ. ಸರ್ಕಾರದ ಮನ್ನಣೆ ಕೀರ್ತಿ ಸ್ತ್ರೀ ಪುತ್ರ ಸೌಖ್ಯತೆ ಪುಣ್ಯಕಾರ್ಯಾ ವೃದ್ಧಿ ಮನೋಲ್ಲಾಸ ಸತ್ಕಥಾ ಶ್ರವಣ ಲಾಭ ಕಾರ್ಯ ತಾ|| 13 14 ಫಲ ಕಡಿಮೆ. ಜಂಜಲತೆ ದ್ರವ್ಯ ನಷ್ಟ ಶ್ರೀ ರಾಮ ಪೂಜೆಮಾಡಿಸಿ ಬೆಲ್ಲ ದಾನಮಾಡಿ ಶುಭ.

ಕರ್ಕಾಟಕ

ಈ ವಾರದಲ್ಲಿ ನಿಮಗೆ ಆಯವ್ಯಯ ಸಮನಾಗಿರುತ್ತೆ ಪದವ್ಯಾ ಸುಖ ಕೀರ್ತಿ ಗೃಹಕೃತ್ಯಾನುಕೂಲತೆ ದೇವತಾ ಗುರು ಸೇವಾ ರಾಜಕೀ ಜನ ವಿಶ್ವಾಸ ಶತ್ರು ಜಯ ತಾ|| 15 16 ಕೀರ್ತಿ ಭಂಗ ಸ್ತ್ರೀ ವಿರೋಧ ಅನಾರೋಗ್ಯತೆ ಶ್ರೀರಾಮದೇವರಿಗೆ ಕ್ಷೀರಾಭಿಷೇಕವಮಾಡಿಸಿ ಫಲ ಉತ್ತಮ.

ಸಿಂಹ

ಈ ವಾರದಲ್ಲಿ ಒಳ್ಳೇ ಕೀರ್ತಿ ವಿರೋಧದಿಂದ ಜಯ ಪುಣ್ಯ ಕಥಾ ಪ್ರಸಂಗ ಮನೋಲ್ಲಾಸ ಬಂಧು ಜನ ವಿಶ್ವಾಸ ರಾಜಕೀ ಮರ್ಯಾದೆ ಪೂಜ್ಯರ ಪೂಜೆ ಶತ್ರುಂಜಯ ಪುತ್ರಾದಿ ಸೌಖ್ಯ ಶುಭಕಾರ್ಯ ತಾ||14 ಪಾನಕ ಪೂಜೆಮಾಡಿಸಿ ಇನ್ನು ಫಲಾಧಿಕವಾಗುತ್ತೆ.

ಕನ್ಯಾ

ನಿಮಗೆ ರಾಜಕೀ ಜನ ವಿರೋಧ ಸ್ತ್ರೀಗೆ ಅನಾರೋಗ್ಯ ಋಣ ಬಾಧೆ ಶತ್ರು ಜನ ಮುಂದಾಗಿ ಒರುವರು. ಸ್ವಜನ ಮೃತಾ ಅಸವಾದ ಅನಾರೋಗ್ಯ ಜಂಜಲತೆ ಶ್ರೀ ರಾಮಾರ್ಚನೆಮಾಡಿಸಿ ಪರಿಹಾರ ಶುಭ ಫಲ ತಾ|| 13 14 ಫಲ ಉತ್ತಮ ಭೈರ್ಯಾಧಿಕ ಕಾರ್ಯಾನುಕೂಲತೆ.

ತುಲಾ

ನಿಮಗೆ ಧನ ಧಾನ್ಯ ವ್ಯಯ ರಾಜಕೀ ಜನ ವಿರೋಧತೆ ಸ್ತ್ರೀ ಮೂಲ್ಕ ಧನ ವ್ಯಯ ಬಂಧು ದ್ವೇಷ ಅಪಕೀರ್ತಿ ಅನಾರೋಗ್ಯತ್ವೆ ಸಹಸ್ರನಾಮ ಪಾರಾಯಣ ಮಾಡಿ ಶುಭ ತಾ|| 15 16 ಕಾರ್ಯಾಧಿಕ ಲಾಭ ಉತ್ಸಾಹ.

ವೃಶ್ಚಿಕ

ಈವಾರದಲ್ಲಿ ಪ್ರವಾಸದಿಂದ ವ್ಯಯ ಬಂಧುವಿರೋಧ ಭೃತ್ಯ ಮೂಲ್ಕ ನಷ್ಟ ನೀಚಾಶ್ರಯ ಕಾರ್ಯ ನಿಧಾನತೆ ವಿರೋಧದಿಂದ ಅಪಜಯ ಸ್ತ್ರೀವಿರೋಧತೆ ಪಾನಕ ಪೂಜೆಮಾಡಿಸಿ ಮಂಗಳ ತಾ|| 15 16 ಭೂ ಸ್ಥಿತಿ ವೃದ್ಧಿ ಕಾರ್ಯದಲ್ಲಿ ಶುಭ ತ್ಸಾಹ ಕೀರ್ತಿ ಮಂಗಳ.

ಧನಸ್ಸು

ಈ ವಾರದಲ್ಲಿ ರಾಜಕೀ ಪ್ರೀತಿ ಬಂಧು ಪೋಷಣೆ ಪೂಜ್ಯರ ಸೇವಾ ಫಲ ಸ್ತ್ರೀ ಪುತ್ರ ಸೌಖ್ಯ ಭೂಸ್ಥಿತಿ ವೃದ್ಧಿ ಪ್ರಯತ್ನ ಕಾರ್ಯಾನುಕೂಲ ಪುಣ್ಯತೀರ್ಥ ಸ್ನಾನ ಫಲ ತಾ|| 14 ಶ್ರೀರಾಮ ಸೇವೆಗೆ ಸಹಾಯಮಾಡಿ ಫಲಾಧಿಕವಾಗುತ್ತೆ.

ಮಕರ

ನಿಮಗೆ ಶತ್ರು ಬಾಧೆ ಅನಾರೋಗ್ಯ ಆಚಾರ ಭಂಗ ಧಾನ್ಯ ನಷ್ಟ ಸ್ತ್ರೀಪುತ್ರ ವಿರೋಧತೆ ರಾಜಕೀ ಜನ ವಿರೋಧತೆ ಬೂದಕುಂಬಳ ದಾನಮಾಡಿ ಶ್ರೀರಾಮಾರ್ಚನೆಮಾಡಿಸಿ ಫಲ ಉತ್ತಮ ತಾ|| 13 14 ಲಾಭ ವಾರ್ತಾ ಕಾರ್ಯದಲ್ಲಿ ಉತ್ಸಾಹ.

ಕುಂಭ

ತಾ|| 10, 11, 12. ವಿರೋಧ ಫಲ ಕಾರ್ಯ ಭಂಗ ಅನಾರೋಗ್ಯತೆ ಜಂಜಲತೆ ವಿರೋಧದಿಂದ ಶತ್ರು ವೃದ್ಧಿ ಬಂಧು ದ್ವೇಷ ತೊಗರಿ ಬೇಳೆ ದಾನಕೊಡಿ ಸಹಸ್ರನಾಮಾರ್ಚನೆಮಾಡಿಸಿ ಶುಭ ಬಾಕಿ ದಿವಸಗಳಲ್ಲಿ ಬಂಧು ವಿತ್ರಾದಿ ಸಮಾಗಮನ ರಾಜಕೀ ಜನರಿಂದ ಸೌಖ್ಯತೆ ಶುಭ ಕಾರ್ಯ ದೇವತಾ ಗುರು ದರ್ಶನ.

ಮೀನ

ನಿಮಗೆ ರಾಜಮಿತ್ರರಿಂದ ಸುಖ ದೊಡ್ಡವರ ಆಶ್ರಯ ಧನಧಾನ್ಯದ ಸುಖ ದೇಹಾರೋಗ್ಯ ಕೀರ್ತಿ ಕಾರ್ಯಾನುಕೂಲ ತಾ 13 14 ವಿರೋಧ ಫಲ ಜಂಜಲತೆ ಫಲ ಧಾನಮಾಡಿ ಶ್ರೀರಾಮ ಸೇವಾಮಾಡಿ ಫಲ ಉತ್ತಮ ಉತ್ಸಾಹ ಕೀರ್ತಿವುಂಟು.

ವಿವಿಧ ವಿಷಯ

ಲಂಡನ್, ಏ. 5—ಎಸ್ಪೇ ಹಾಲಿನಲ್ಲಿ ಹಿಂದೂ ಸಂಘದ ಆಶ್ರಯದಲ್ಲಿ ಸ್ವಾಮಿ ಅಭೇದಾನಂದರವರು ಮಾತನಾಡುತ್ತಾ—ಹಿಂಸಾ ಅಹಿಂಸಾ ತತ್ವ ವಿಚಾರ ವಿವರಿಸಿ, ಇಂಡಿಯಾಕ್ಕಾಗಿ ಸತ್ಯವನ್ನು ಜೇಕಾದರೂ ಹತಮಾಡುವುದಾಗಿ ಲೋಕಮಾನ್ಯ ತಿಲಕರು ಅಭಿಪ್ರಾಯವಾಗಿದ್ದಿತೆಂದೂ, ಆದರೆ ಮಹಾತ್ಮಾ ಗಾಂಧಿಯವರು ಸತ್ಯಕ್ಕಾಗಿ ವಿನಸ್ಸು ಜೇಕಾದರೂ ತ್ಯಾಗಮಾಡುವುದಾಗಿರುವುದೆಂದೂ ಹೇಳಿದರು. ಗಾಂಧಿಯವರು ಅರಿತಿರುವ ಅಹಿಂಸಾ ತತ್ವವು ಸುಖ ಶಾಂತಿ ಮಾರ್ಗವೆಂದು ತಿಳಿಯಿಸಿಹಿರುವರು.

ಸ್ಟಾಕ್‌ಹೋಂ ಏ. 5—ಜರ್ಮನರಿಗೆ ಸ್ವೀಡನ್ನಿನವರು ಕೊಟ್ಟಿರುವ ರಿಯಾಯಿತಿ ಬಗ್ಗೆ ಇಲ್ಲಿಯ ವಾಣಿಜ್ಯ ಮಂತ್ರಿ ತಿಳಿಸುತ್ತಾ ಅವನ್ನು ವಿಾರಿ ನಡೆದರೆ ತಕ್ಕ ತಹಬಂದಿ ವಹಿಸಲಾಗುವುದೆಂದೂ ತಿಳಿಸಿರುವರು. ಪರಿಸ್ಥಿತಿ ಕೆಟ್ಟರೆ ನಮ್ಮ ಸ್ವಾತಂತ್ರ್ಯದ ಮೇಲೆ ಯಾರಾದರು ಕೈ ಮಾಡಿದರೆ ನಾವು ಕಾಪಾಡಿಕೊಳ್ಳಲು. ನಿರ್ಧರಿಸಿರುವೆವೆಂದೂ ತಿಳಿಸಿರುವರು.

ರಯೋಡಿಜನಿರೋ ಏ. 5—ಆಕ್ಸಿಸ್ ಮೇಲೆ ಬೆಲಿವಿಯಾವು ಯುದ್ಧವನ್ನು ಈ ದಿವಸ ಸಾರುವುದೆಂದೂ, ನಂತರ ಸೈನ್ಯ ಜಮಾವಣೆ ನಡೆಯುವುದೆಂದೂ ಹೇಳಲಾಗಿದೆ

ಗ್ರೀಸ್ ಮೇಲೆ ದಂಡಯಾತ್ರೆ ಕೆಲವು ತಿಂಗಳೊಳಗಾಗಿ ನಡೆಯುವುದೆಂದು ಹೇಳಲಾಗಿದೆ.

ಯೂರೋಪಿನ ಮೇಲೆ ದಂಡಯಾತ್ರೆಯು ನಡೆಯುವುದೆಂಬ ಭೀತಿಯು ಅಲ್ಲಿಯ ರಾಜಧಾನಿಗಳಲ್ಲಿ ಹುಟ್ಟಿದೆ. ನಾಜಿಗಳು ರಕ್ಷಣಾ ವಿಸರ್ಜಿಸುಗನ್ನಾಳ ಮಾಡಿಕೊಳ್ಳುತ್ತಿರುವರೆಂದು ಹೇಳಲಾಗಿದೆ.

ಟ್ಯುನಿಷಿಯಾದಲ್ಲಿ ಬ್ರಿಟಿಷ್ ಎಂಟನೇ ಸೈನ್ಯವೂ ಒಂದನೇ ಸೈನ್ಯವೂ ಒಂದುಗೂಡುವುದೇನೋ ಎಂದು ಭಯವು ರೋಮೆಲ್ಲನಿಗೆ ಭಯವನ್ನುಂಟು ಮಾಡಿದೆ.

ಕೈರೋ. ಏ. 6— ಪಶ್ಚಿಮ ಮರಳುಕಾಡಿನಲ್ಲಿ ಇಟಲಿಯನ್ ಜನರಲ್ ಬರ್ಗನ್ಜೋಲಿಯು ಹಿಡಿಯಲ್ಪಟ್ಟ ನಂತರ ಅತನ ಕತ್ತಿಯು ಇಂಗಿಕನ ಫೈನ್ಸ್ ಲ್ ರಾಜರಿಗೆ ಮಧ್ಯ ಪ್ರಾಚ್ಯದ ಮಿತ್ರ ಸಂಯೋಜಿತ ಕಮ್ಯಾಂಡರು ಬಹಾಮಾನಿಸಿದರು.

ಆಗ್ನೇಯ ಬಂಗಾಳದಲ್ಲಿ ಮೊನ್ನೆ ಮಧ್ಯಾಹ್ನ ಶತ್ರು ವಿಮಾನಗಳು ಹಾರಾಡಿ ಸ್ವಲ್ಪ ನಷ್ಟಪಡಿಸಿವೆ.

5 ನೇ ತಾರೀಖು ಆರ್. ಎ. ಎಫ್. ನವರು ರಂಗೂನ್ ಮೇಲೆ ಧಾಳಿ ನಡೆಸಿದರು.

ವೆಸ್ಟ್ ಮಿನಿಸ್ಟರ್ ಏ. 6 — ಲಾರ್ಡ್ಸ್ ಸಭೆಯಲ್ಲಿ ಈ ದಿವಸ ಇಂಡಿಯಾ ವಿಚಾರ ಚರ್ಚೆ ನಡೆಯಿತು.

ಕಲ್ಕತ್ತಾ ಏ 6— ಇಂಡಿಯನ್ ರೆಡ್ ಕ್ರಾಸ್ ವಾರ್ಷಿಕ ಸಂಚಿಕೆಯು ಜರ್ಮನಿ ವತ್ತು ಇಟಲಿಯಲ್ಲಿ ಸುಮಾರು 20 ಸಾವಿರ ಭಾರತೀಯ ಖೈದಿಗಳಿರುವರೆಂದು ತಿಳಿಸುತ್ತದೆ.

ಈ ಸಾರಿ ನೈಸರ್ಗಿಕ ವಸ್ತುಪ್ರದರ್ಶನವನ್ನು ಪ್ರದರ್ಶನವು ನಡೆಸಲ್ಪಡುವಂತೆ ಸರ್ಕಾರೀ ಆರ್ಡರಾಗಿರುವುದಾಗಿ ತಿಳಿಯ ಬಂದಿದೆ.

ಚೈನಾದ ಪೋಸ್ಟಾಫೀಸ್ ಡಿಸ್ಟ್ರಿಕ್ಟಿನಲ್ಲಿ ಕೊಟ್ಟಿಗಿಲ್ಲದೆ 50 ಲಕ್ಷ ಪ್ರಜೆಗಳು ಸಾಯುವ ಸ್ಥಿತಿ ಬಂದಿದೆಯೆಂದು ಪ್ರಕಟವಾಗಿದೆ.

ಚೀನಾ ಶಿಕ್ಷಣ ಮಂಡಲಿಯವರು ಮದರಾಸಿನಲ್ಲಿ ಮಾತನಾಡುತ್ತ ಚೈನಾದಲ್ಲಿ 4 ಕೋಟಿ 80 ಲಕ್ಷ ಮುಸಲ್ಮಾನರಿರುವರು. ಅಲ್ಲಿ ಮುಸಲ್ಮಾನರಿಗೆ ಮೊದಲು ನಂತರ ಚೈನಾದವರಿಗೆ ಎನ್ನುವ ಭಾವವೇ ಇಲ್ಲವೆಂದರು-

ಈಗ ಬೇಸಿಗೆಯಲ್ಲಿ ರಷ್ಯನರು ತಾವೇ ಮುಂದೆ ನುಗ್ಗುವರೋ ಇಲ್ಲವೆ ಜರ್ಮನರನ್ನು ತಡೆಯುವರೋ ಇದು ಈಗ ಉತ್ತರ ಆಫ್ರಿಕಾದಲ್ಲಿ ಮತ್ತು ಇತರ ಕಡೆಗಳಲ್ಲಿ ಮಿತ್ರ ಪಕ್ಷದವರು ಗೂಡಿರುವ ಯುದ್ಧ ಫಲಿತಾಂಶದಿಂದ ಗೊತ್ತುಮಾಡುವರಂತೆ.

ವರ್ತಮಾನ

ಇಟಲಿ ದೇಶದ ರೇವುಪಟ್ಟಣದ ಅಡಳಿತವನ್ನು ನಾಜಿಗಳು ತಮ್ಮ ವಶಪಡಿಸಿಕೊಂಡರು.

ತನ್ನ ಹೆಸರನ್ನು ಹೊರಗಡಿಸದೆ ಚಿಕಾಗೋನಲ್ಲಿ ಒಬ್ಬ ಹೆಂಗಸು ಒಂದು ಲಕ್ಷ ಡಾಲರನ್ನು ಚೈನಾಕ್ಕೆ ಮೋಡಂ ಚಿಯಾಂಗ್ ಕೈಸಕರಿಗೆ ಕೊಟ್ಟಳು.

ರಷ್ಯಾದಲ್ಲಿ ಒಬ್ಬ 78 ವರ್ಷದ ಮುದುಕನಿರುವನು. ಈಗ ಅವನು ತನ್ನ 42 ನೇ ಮೊನ್ಮಗನನ್ನು ಯುದ್ಧಕ್ಕೆ ಕಳುಹಿಸಿರುವನು. ಈ ಎಲ್ಲಾ 42 ಮೊಮ್ಮಕ್ಕಳು ಈಗ ರಣರಂಗದಲ್ಲಿರುತ್ತಾರೆ. ಇವರು ಈಗಾಗಲೇ 10 ಕಮಿಷನ್ ಡ್ ನಾಜಿಗಳನ್ನು ಕೊಂದಿರುವರು. ಈ ಮುದುಕನು ಮನೆಯಲ್ಲಿ ಸುಮ್ಮನೆ ಕೂತಿಲ್ಲ. ತಾನು ಬೀದಿ ಬೀದಿ ಸುತ್ತಿ ಲೋಹಗಳನ್ನು ಶೇಖರಿಸಿ 2000 ಪೌಂಡಾಗೆ ಬೇಕಾದಷ್ಟನ್ನು ಸರ್ಕಾರಕ್ಕೆ ಕೊಟ್ಟಿರುವನು.

ರಷ್ಯನರು ಹಿಮಕಾಲದ ಯುದ್ಧದಲ್ಲಿ ಜರ್ಮನರಾದ 480000 ಚದರ ಮೈಲಿ ಭೂಮಿಯನ್ನು ಪುನಃ ತೆಗೆದುಕೊಂಡರು ಅಲ್ಲದೆ 1490 ವಿಮಾನಗಳು 4170 ಟ್ಯಾಂಕ್, 1586 ಗುಂಡು 9335 ಭಾರಿ ಗುಂಡು 30705 ಮಿಷನ್ ಗನ್ ಸಹ ತೆಗೆದುಕೊಂಡರು. ಈ ಕಾಲದಲ್ಲಿ 850000 ಜರ್ಮನರು ಸತ್ತರು. 34352 ಜರ್ಮನರು ರಷ್ಯನರಿಗೆ ಶರಣಾಗತರಾದರು. ಇಷ್ಟಲ್ಲದೆ 3600 ವಿಮಾನ, 4500 ಟ್ಯಾಂಕ್, 4509 ಗುಂಡು ಇವನ್ನು ಸುಟ್ಟರು. ಈಚೆಗೆ 4 ವಾರದಲ್ಲಿ ಜರ್ಮನರ 938 ವಿಮಾನಗಳನ್ನು ನಾಶಮಾಡಿದರು.

ಅಬ್ಸೀನಿಯಾವು ಇಟಲಿಯವರ ಅಡಳಿತದಲ್ಲಿದ್ದಾಗ ಗಣಿ ಮತ್ತು ಜಿಯೋಲಾಜಿಲ್ ಡೈರೆಕ್ಟರಾಗಿದ್ದರು. ಇವರು ರೋಮ್ ಮತ್ತು ಬರ್ಲಿನ್ ವಿಶ್ವವಿದ್ಯಾನಿಲಯಗಳಲ್ಲಿ ಓದಿ ಸಿವಿಲಿಯನ್ನು ರಾಗಿದ್ದರು. ಇಂಗ್ಲೀಷರು ಅಬ್ಸೀನಿಯಾ ದೇಶವನ್ನು ಗೆದ್ದಾಗ ಇವರನ್ನು ಸೆರೆಹಿಡಿದು ಹಿಂದೂಸ್ಥಾನಕ್ಕೆ ತಂದರು. ಇವರ ಯೋಗ್ಯತೆಯನ್ನು ನೋಡಿ ಇವರು ಇಟಲಿಯವರಾಗಿದ್ದರೂ ಇವರನ್ನು ಜಯಪುರದಲ್ಲಿ ಜಿಯೋಲಾಜಿಕಲ್ ಮತ್ತು ಗಣಿಗಳ ಇಂಜಿನಿಯರಾಗಿ ನೇಮಿಸಲ್ಪಟ್ಟರು ತ್ತಾರೆ.

ಜನರ ಅಭಾವದಿಂದ ಇಟಲಿಯವರು ಕಳ್ಳರನ್ನು ಕೂಡ ಈಗ ಸೈನ್ಯಕ್ಕೆ ಕೊಳ್ಳುತ್ತಿರುವರು.

ಲಂಡನ್ನಿನ ಒಂದು ಕೋರ್ಟಿನಲ್ಲಿ ಬ್ರಹ್ಮಚಾರಿ ಜಡ್ಜಿಯವರ ಮುಂದೆ ದ್ವಿಪತ್ನಿ ವರಿಸಿದ ಕೇಸ್ ವಿಚಾರಣೆಗೆ ಬಂತು. ಜಡ್ಜಿಯು ಯಾತಕ್ಕೆ ಜನರು ಮೇಲೆ ಮೇಲೆ ಮದುವೆಯಾಗುವರು. ನಾನು ಮದುವೆಯೇ ಮಾಡಿಕೊಂಡಿಲ್ಲ. ಕೆಲವರು ತಿಂಗಳಿಗೆ ಒಂದರಂತೆ ಮದುವೆ ಮಾಡಿಕೊಳ್ಳುವರು ಎಂದರು. ಅಲ್ಲಿದ್ದವರೆಲ್ಲರೂ ನಕ್ಕರು.

ಆಂಗ್ಲೋಯರ ಟೈಗರ್ ಎಂಬ ಭಾರಿ ಸಬ್‌ಮೆರಿನ್ ಒಹಳ ದಿವಸದಿಂದ ಜಾಡರದಿರಲು ಅದು ನಷ್ಟವಾಗಿರಬಹುದೆಂದು ಊಹಿಸಲಾಗಿದೆ.

ಜೂನ್ 3 ರಲ್ಲಿ ರಿಟೈರಾಗುವ ವಿದ್ಯಾಭ್ಯಾಸ ಇಲಾಖಾ ಡೈರೆಕ್ಟರ್ ಮಿ|| ವಾಡಿಯರವರ ಸ್ಥಾನಕ್ಕೆ ಮಿ|| ಸುಲ್ತಾನ್ ಮೊಹಿದೀನರು ನಿಯಮಿಸಲ್ಪಡುವರೆಂದು ತಿಳಿಯಬಂದಿದೆ.

ಇಂಗ್ಲೆಂಡಿನಲ್ಲಿ 1928 ರಿಂದ ಇದುವರೆಗೂ ಅಗಾಧ ಜನನ ಆಗಿದೆಂದು ವರದಿಯಾಗಿದೆ. 1942 ರಲ್ಲಿ 655075 ಜನನವೆಂತಲೂ ಅಂದರೆ 1941 ರ ಗಿಂತ 68000 ಹೆಚ್ಚಾಗಿ ಹುಟ್ಟಿದಂತಾಯಿತು.

Opera

MORNING SHOW

ಎಲ್ಲೆಲ್ಲಿ ಏನೇನು ?

ಪೈಕರಾಯುರು ನಾಲ್ಕು ತಿಂಗಳು ರಜಾ ಪಡೆದು ಇಂಗ್ಲೆಂಡಿಗೆ ಹೋಗಿ ಇಂಡಿಯಾ ರಾಜಕೀಯ ವಿಷಯವಾಗಿ ಮಾತನಾಡುವರಂತೆ.

42 ಟೆಲಿಗ್ರಾಫ್ ಕಂಭಗಳ ಜಾಲಿಗೆ ಕೊಡಲಿಲ್ಲವೆಂದು ಮರ್ಚಂಟ್‌ಬಾಡಿನ ಮುನಿಸಿಪಾಲಿಟಿಯವರು ಗೌರ್ನಮೆಂಟಿನ ಮೇಲೆ ದಾವಾ ಮಾಡಿರುವರು.

ಜರ್ಮನರು ಗೇಜ್ಸ್ ಬಿಡುವಾಗ ಅಲ್ಲಿದ್ದ ಯಹೂದ್ಯರ ಆಸ್ತಿಯನ್ನೆಲ್ಲಾ ಅಂದರೆ 12 ಲಕ್ಷ ಫ್ರಾಂಕ್‌ಗಳನ್ನು ದೋಚಿಕೊಂಡುಹೋದರು.

ಈಗ ಜರ್ಮನರು ಓಡಿಹೋಗುವಾಗ ಅಲ್ಲೆಲ್ಲಾ ಮೈನುಗಳನ್ನು ಹಾಕಿತ್ತರಂತೆ. ಈ ಮೈನುಗಳನ್ನು ಕಂಡು ಹಿಡಿದವರು ಇಂಗ್ಲೀಷಿನವರು, 1914 ರಲ್ಲಿ.

ಹಿಟ್ಲರಿಗೆ ಈಗ ಎಷ್ಟೆಯ ಅಭಾವವಾಗಿದೆ. ಜರ್ಮನಿಗೆ ಸರಬರಾಜಾಗುತ್ತಿದ್ದ ಕಡೆಗಳಲ್ಲೆಲ್ಲಾ ಮಿತ್ರರಾಷ್ಟ್ರದವರಿಗೆ ಸರಬರಾಜಾಗುತ್ತಿದೆ.

ಕೊಯಮತ್ತೂರಿನ ಸಬ್ ಮಾಜಿಸ್ಟ್ರೇಟರನ್ನು ಕೆಲಸ ಬಿಡುವಂತೆ ಕಾಗದ ಒರೆದರೆಂದು 7 ಜನರನ್ನು ದಸ್ತಗಿರಿ ಮಾಡಿರುತ್ತಾರೆ.

ಈಗ ಟ್ಯುನಿಷಿಯಾದಲ್ಲಿ ಜರ್ಮನರಿಗೆ ದಿನೇದಿನೇ ಸೋಲಾಗುತ್ತಿದೆಯಷ್ಟೆ. ಡಂಕರ್ಕಿನಲ್ಲಿ ಇಂಗ್ಲೀಷರಿಗೆ ಆದಹಾಗೆ ಇಲ್ಲಿ ತಮಗೂ ಆಗಬಹುದೆಂದ, ಇಲ್ಲಿಂದ ಹೊರಡಲು ಸಿದ್ಧವಾಗಿಕೊಂಡಿರುವರು. ಎಲ್ಲರೂ ತಮ್ಮತಮ್ಮ ಸಣ್ಣ ಸಣ್ಣ ಹಡಗುಗಳನ್ನು ಬಹಳ ಕಷ್ಟ ಬರೀದಿಗೆ ಕೇಳಿರುವರು; ಸಮಯ ಬಂದಗ ಟ್ಯುನಿಷಿಯಾದಲ್ಲಿನ ಸೈನ್ಯವನ್ನು ರೋಮ್ ನಲ್ಲಾಗಲೀ ಸೇಪಲ್ಸ್‌ನಲ್ಲಾಗಲೀ ಇಳಿಸಲು ಎಲ್ಲಾ ಸಿದ್ಧತೆಗಳನ್ನೂ ಮಾಡಿಕೊಂಡಿರುವರು.

ಈಚೆಗೆ ನಡೆದ ಕಾಂಗ್ರೆಸ್ ಜಯದಶಮಿಯ ಕಾಲದಲ್ಲಿ ಅಲ್ಲಿಯ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರು ತಮ್ಮ ಖಚಾನೆಯಲ್ಲಿದ್ದ ನಾಲ್ಕೂವರೆ ಲಕ್ಷ ರೂಪಾಯಿಗಳ ನೋಟುಗಳನ್ನು ಸುಡಲು ಅಪ್ಪಣೆ ಮಾಡಿದರು. ಈ ನೋಟುಗಳಲ್ಲಿ ಕೆಲವು ಹೇಗೋ ಜಲಾವನೆಗೆ ಒಂದಿನೆ ! ಈಗ ರಿಜರ್ವ್‌ಬ್ಯಾಂಕಿನವರು ಈ ನೋಟುಗಳ ಬಾಬತ್ತು ನಾಲ್ಕೂವರೆ ಲಕ್ಷ ರೂಪಾಯಿಯತ್ತು ಕೊಡಬೇಕೆಂದು ಸರಕಾರದವರನ್ನು ಕೇಳಿರುವರು.

ಬರ್ಮಾ ಯುದ್ಧವು ಏತಕ್ಕೆ ತಡ ?

ಈಗ ಒಂದು ವರ್ಷದ ಹಿಂದೆ ಮಿತ್ರ ಪಕ್ಷದವರು ಬರ್ಮಾ ಗಡಿಯಲ್ಲಿ ವಿಶೇಷವಾಗಿ ಸೈನ್ಯಗಳನ್ನೂ ಮದ್ದು ಗುಂಡುಗಳನ್ನೂ ಶೇಕರ ಮಾಡಿದ್ದರು. ಮಿತ್ರ ಪಕ್ಷದ ರಾಜ್ಯಾಧಿಕಾರಿಗಳು ಬರ್ಮಾ ರಸ್ತೆಯನ್ನು ಗೆದ್ದು ಚೈನಾಕ್ಕೆ ಸಹಾಯವನ್ನು ಸೀಡುವುದಾಗಿ ಹೇಳಿದ್ದರು. ಆಗ ಗೆಯುರು ಬರ್ಮಾದ ಯಾವುದೂ ಇಲ್ಲದ ಪ್ರದೇಶವನ್ನು ಮುತ್ತಿದಾಗ ಇನ್ನೇನು ಬರ್ಮಾ ಯುದ್ಧವು ಪ್ರಾರಂಭವಾಯಿತೆಂದು ತಿಳಿದಿದ್ದೆವು. ಈಗ ನೋಡಿದರೆ ಬರ್ಮಾ ಯುದ್ಧವು ಆತ್ಮರಕ್ಷಣೆಯೇ ಗೊತ್ತಾಗುವುದು. ಜಪಾನಿನು ಒಂಗಳಾ ದೇಶವನ್ನು ಬಾಂಬಿನಿಂದ ಸುಡುತ್ತಿರುವರು ಸೇಡು ತೀರಿಸಬೇಕಲ್ಲವೆ ? ಮಿಲಿಟರಿಯ ಯುದ್ಧಕ್ಕಿಂತ ರಾಜಕೀಯ ಯುದ್ಧವು ಮುಖ್ಯವಲ್ಲವೆ ? ಹಿಂದೂಸ್ಥಾನದವರು ತಮ್ಮ ಮುಖ್ಯಸ್ಥರನ್ನು ಒಂಭನದಲ್ಲಿಟ್ಟಿರುವುದರಿಂದ ತಟಸ್ಥರಾಗಿರುವರು ಈ ಸಮಾಚಾರವನ್ನು ಪುಲಿಟ್ಸರ್ ಅಧಿಕಾರಿಗಳು ಯೋಚಿಸುವುದು ಒಳ್ಳೆಯದಲ್ಲವೆ ?

SHAKTI
SUDHA
A Panacea
for
All Debilites

ಬೇಕಾಗಿದಾರೆ

ಮೈಸೂರಿನ ಎಲ್ಲಾ ಕಡೆಗಳಲ್ಲಿಯೂ ಪತ್ರಿಕೆಯನ್ನ ಮಾರಲೂ ಚಂದಾದಾರರಿಗೆ ಕೊಡಲೂ ಕೆಲವರು ಬೇಕಾಗಿದ್ದಾರೆ.

ಹೆಚ್ಚಿನ ವಿಷಯಗಳನ್ನು ಮೊಖ್ತಾ ವಿಚಾರಿಸಿ ತಿಳಿಯಬಹುದು

ಮ್ಯಾನೇಜರ್, ಸತ್ಯವಾದಿ ಪ್ರೆಸ್
ಚಾಮರಾಜಪುರಂ ಮೈಸೂರು.

ಶಕ್ತಿ ಸಾಧನೆಗೆ ಸುಲಭೋಪಾಯವು
ಶಕ್ತಿ ಸುಧಾ
ಸೇವನೆ ಎಂಬುವುದು
ನಿಮ್ಮ ಜ್ಞಾಪಕದಲ್ಲಿರಲಿ

ವರ್ತಮಾನ

ರಷ್ಯಾದವರು ಒಂದು ಹೊಸ ತರಹ ಆಕಾಶಬಾಣವನ್ನು ತಯಾರ್ಮಾಡಿರುವರು. ಇದು 15 ನಿಮಿಷ ಅಂತರಕ್ಷದಲ್ಲಿ ನೂರಾವರ್ತಿ ಬೆಳಕನ್ನು ಕಾರುವುದು. ಇದರಿಂದ ಶತ್ರುಗಳ ವಿಮಾನ ಚಲನೆಯನ್ನು ಗುರ್ತಿಸಲು ಅನುಕೂಲವಾಗುವುದು.

ವೆಣಸಿನ ಕಾಯಿ ಬೆಲೆಯು ಹೆಚ್ಚಿರುವುದರಿಂದ ಸಿಲೋನಿನಲ್ಲಿ ಅದರ ಬೆಳವಣಿಗೆಯ ಭಾವವು ಹೆಚ್ಚುತ್ತಿದೆ. ವೆಣಸಿಕಾಯಿಯ ಆಭಾವವು ಅಲ್ಲಿ ನೆಲೆಗೊಂಡಿರುವ ಹಾಗೂ ಕೆಲಸ ಕಾರ್ಯಗಳಿಗೆ ಹೋಗಿರುವ ಹಿಂದೂದೇಶೀಯರನ್ನು ಅಲ್ಲಿಂದ ಹಿಂದೂದೇಶಕ್ಕೆ ಹಿಂತಿರುಗುವಂತೆ ಮಾಡಬಹುದು ಎಂದು ಸಿಲೋನಿಯರಲ್ಲಿ ಕೆಲವರು ಅಭಿಪ್ರಾಯಪಡುವರು. ವೆಣಸಿಕಾಯಿಯಲ್ಲಿ ಪೌಷ್ಟಿಕ ಬಗೆಯ ಆಹಾರ ಸಂಬಂಧವಾದ ಗುಣವಿಲ್ಲದಿದ್ದರೂ ನಾಲಿಗೆಗೆ ರುಚಿ ಕೊಡಲು ಇವರ ಆವಶ್ಯಕತೆ ಇದೆ.

ಸತ್ಯವಾದಿ ಪತ್ರಿಕೆಗೆ
ಚಂದಾದಾರರಾಗಿರಿ
ದಿನ ಮತ್ತು ವಾರಪತ್ರಿಕೆಗೆ
ಚಂದಾ ಮೈಸೂರು ಮತ್ತು ಏಜೆಂಟರಿಗೆ
ತಿಂಗಳಿಗೆ 6 ಆಣೆ

ಹೊಸ ಉದ್ಯಮ ! ಹೊಸ ಸೆದ್ದಿ !!
ಸಿನಿಮಾ ಪ್ರಪಂಚದಲ್ಲಿ
— ಹೊಸ ಸಾಧನೆ —
ಮೈಸೂರು ಮಾಧವ ಮೂವಿಟೋನ್
ರವರ ಪ್ರಥಮ ತಮಿಳು ಚಿತ್ರ-
ನೀ ನು ಧಾ
(ಸಾಮಾಜಿಕ ಚಿತ್ರ)
ಕಥೆ— "ಸಾಹಸಿ"
ತಯಾರಿಕೆ— ಎಸ್. ಕೆ. ಚಾರಿ
ಸಂಗೀತ— ಪಿ. ಕೇಶವನ್ ಬಾರ್ಮ್ಸ್ ಮೈಸೂರು
ಸಾರಥಿ — ಪಿ ಎಸ್. ವಿ ಐಯ್ಯರ್
ಬಹು ಬೇಗನೆ
ನಿಮ್ಮ ಮನರಂಜನೆಗೆ ಬರಲಿದೆ.
ರಸವತ್ತಾದ ಕಥೆ
ಸಂಗೀತದ ಸೊರೆ
ಕಲಾಪೂರಿನ ಅಭಿನಯ
ನಿಮ್ಮ ಮನವೊಸುವ್ವ
ನಟನಟಿಯರು
ನಿಮ್ಮ ಪ್ರೀತಿಯ ಮಂದಿರದಲ್ಲಿ
ಎದುರು ನೋಡಿ—
ಶ್ರೀ ಮಾಧವ ಮೂವಿಟೋನ್
21 ವೆಂಕಟಾಚಲ ನಾಯುರ್ ಸ್ಟ್ರೀಟ್
ಮೌಂಟ್ ರೋಡ್. ಮದ್ರಾಸು.
NVKS

ಪಾಕಿಸ್ಥಾನವು ಆಗಬೇಕೆಂಬುದಾಗಿ ಸಿಂಧ್ ಪ್ರಾಂತದ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಠರಾವು ಆಗಿರುವುದಕ್ಕೆ ಪ್ರತಿಯಾಗಿ ಸಿಂಧಿನ ಹಿಂದೂಗಳು ಬೇರೊಂದು ಚಟುವಟಿಕೆಯನ್ನು ಹೂಡುವ ಸಂಭವನವಿದೆ ಸಿಂಧೀಸ್ಥಾನ್ ಎಂಬುದಾಗಿ ಸಿಂಧ್‌ನ ಹಿಂದೂಗಳಿಗೆ ಪ್ರತ್ಯೇಕ ಸ್ಥಾನವು ದೊರೆಯಬೇಕೆಂದೂ ಅವನ್ನು ಬೇಕಿದ್ದಲ್ಲಿ ಬೊಂಬಾಯಿ ಪ್ರಾಂತದ ಜೊತೆಗೆ ಸೇರಿಸಬಹುದೆಂದೂ ಇವರು ಕೇಳುವವರಾಗಿದ್ದಾರೆ. ಈ ರೀತಿಯ ಠರಾವುಗಳು ಸಿಂಧ್ ಹಿಂದೂ ಸೇವಕ ಮಂಡಲದಲ್ಲಿ ಪಾಸಾಗಿವೆ. ಈ ಸಂಸ್ಥೆಯನ್ನು ಶ್ರೀ ನಿಚಲ ದಾಸ್ ವಝೀರಾನಿಯವರು ಏರ್ಪಡಿಸಿದ್ದಾರೆ



ಸಿಂಧ್ ಸರಕಾರವು ಅಧಿಕ ಗೋಧಿಯನ್ನೆಲ್ಲಾ ಕೊಳ್ಳುವುದು.

ಸಿಂಧ್ ಪ್ರಾಂತಕ್ಕೆ ಸಾಕಾಗಿ ಉಳಿಯುವ ಮತ್ತು ಬೆಳೆಯಬಹುದಾದ ಗೋಧಿಯೆಲ್ಲವನ್ನೂ ಸಿಂಧ್ ಸರಕಾರವು ಕೊಂಡುಕೊಂಡು ಕೇಂದ್ರ ಸರಕಾರಕ್ಕೆ ವಹಿಸುವುದು. ಈ ಗೋಧಿ ಕಮ್ಮಿಯಾಗಿರುವ ಪ್ರಾಂತಕ್ಕೆ ಸರಬರಾಜು ಮಾಡಲಾಗುವುದು. ಸಿಂಧ್‌ನಲ್ಲಿ ಗೋಧಿ ವರ್ತಕರು ಮತ್ತು ಗೋಧಿ ಉಪಯೋಗಿಸುವವರು ಗೋಧಿಯನ್ನು ವಿತರಿಸುವ ಸಂಗ್ರಹಿಸದಂತೆ ಪ್ರತಿಬಂಧಕ ಕಾನೂನು ಸುಗಳನ್ನು ಸರಕಾರವು ಏರ್ಪಡಿಸಲಿದೆ.

ಇಟೆಲಿಯವರಿಗೆ ಎಚ್ಚರಿಕೆ !

ಜನರಲ್ ಜೀರೋರವರು ಇಟಲಿಯವರಿಗೆ ಈ ಪ್ರಕಾರ ಎಚ್ಚರಿಕೆ ಕೊಟ್ಟಿದ್ದಾರೆ.— ಇಟಲಿಯವರೇ ! ನಿಮ್ಮೆಬಟ್ಟೆಯಲ್ಲಿ ಇನ್ನು ಕೆಲವು ತಿಂಗಳಲ್ಲಿ ಒಂದು ದಿವಸ ಏನಾಗುತ್ತದೆಂಬುದನ್ನು ತಿಳಿಯುವಿರಿ. ಇಟಲಿಯ ಮೇಲೆ ಸಾವಿರಾರು ವಿಮಾನಗಳು ಹಾರಾಡುವವು. ಇಟಲಿಯವರಿಗೆ ಅನ್ನದಾನ ನೂಡುವ ಕೈಗಾರಿಕೆಗಳನ್ನು ನೆಲಸಮ ಮಾಡುವೆವು. ಆಯ್ಯೋ ಪಾಪ, ಚರಿತ್ರೆಯಲ್ಲಿ ಕಂಡು ಕೇಳದ್ದನ್ನು ನೀವು ಕಣ್ಣಿನಲ್ಲಿ ನೋಡಬೇಕಾಗುವುದು. ಅದುದುಂದ ನೀವು ಶಸ್ತ್ರಾಸ್ತ್ರವನ್ನು ಕೆಳಗಿಡಿ. ನಾವು ಈಗ ಸಂಧಿ ಮಾಡುವುದು ಅನುಕೂಲವಾಗುವುದು. ನೀವು ನಿಮ್ಮ ಫ್ಯಾಸಿಸಂ ತತ್ವವನ್ನು ನಾಶಮಾಡಿ ನಾವು ಹೊರಗಿನಿಂದ ನಿಮಗೆ ಸಹಾಯ ಮಾಡುತ್ತೇವೆ ನಿಮ್ಮ ಸರಕಾರವನ್ನು ತಲೆಕೆಳಕು ಮಾಡಿ. ಇಲ್ಲದಿದ್ದರೆ ಕೆಲವು ವಾರ, ಅಥವಾ ಕೆಲವು ದಿವಸಗಳಲ್ಲಿ ನಿಮ್ಮನ್ನು ನೀವೇ ನಾಶಮಾಡಿಕೊಂಡಂತಾಗುತ್ತೆ; ನಿಮ್ಮ ಪಟ್ಟಣಗಳಲ್ಲಿ ಗುಂಡಿನ ಶಬ್ದಗಳನ್ನು ಕೇಳಬೇಕಾಗುತ್ತೆ.

ಹೊಟ್ಟೆ ಬಾಕ ಕಳ್ಳ

ಕಳೆದ 23 ನೇ ತಾರೀಖು ಬಬ್ಬು ಒಡವೆನಿಗೆ ಮೂರು ದಿನಗಳಿಂದ ಆಹಾರವು ದೊರೆತಿರಲಿಲ್ಲವಾಗಿ, ಒಂದು ಸಂಸಾರಿಗಳ ಮನೆಯೊಳಗೆ ನುಗ್ಗಿ ಅಲ್ಲಿ ತಯಾರಿಸಿಟ್ಟಿದ್ದ ಆಹಾರ ಪದಾರ್ಥಗಳನ್ನು ತಿಂದುಹಾಕಿದನು. ಆತನ ದೌರ್ಭಾಗ್ಯಕ್ಕೆ ಎಲ್ಲರೂ ಕೋಪಗೊಂಡು ಒಯ್ಯಲು ತನಗೆ 2–3 ದಿನಗಳಿಂದ ಆಹಾರ ಸಿಕ್ಕಿದ್ದ ಕಾರಣ ಕಳ್ಳತನ ಮಾಡಬೇಕಾಗಿ ಬಂದಿತೆಂದು ತಿಳಿಸಿದನು. ಮನೆಯವನು ಕರುಣಾರ್ದ್ರ ಹೃದಯನಾದುದರಿಂದ ಅವನನ್ನು ಅಧಿಕಾರಿಗಳ ವಶಕ್ಕೊಪ್ಪಿಸದೆ ಬಿಟ್ಟು ಬಿಟ್ಟನು. ಇದು ಕರ್ನೂಲಿನಿಂದ ಒಂದ ಸುಮಾಚಾರ.

ವರ್ತಮಾನ

ಚೈನಾದಿಂದ ಟೋಕಿಯೋಗೆ ವಿಮಾನ ಪ್ರಯಾಣಮಾಡಲು ಚೈನಾದಲ್ಲಿ ಇವೆರಿಕಾದವರು ನಿಲ್ದಾಣವನ್ನು ಗೊತ್ತುಮಾಡಿರುವರು.

ಯುದ್ಧಾನಂತರ ಪ್ರಪಂಚ ಪುನರಚನೆಯನ್ನು ಇಂಗ್ಲೆಂಡ್ ಅಮೆರಿಕಾ ಎಷ್ಟೂ ಮೂರು ಸೇರಿ ರಚಿಸುವುದಂತೆ. ಈ ರೀತಿಗೆ ರಷ್ಯಾದವರ ಹೆದರಿಕೆ ಇಲ್ಲವಂತೆ

ಇಂಗ್ಲೆಂಡಿನ ಮುಂದಿನ ಬಜೆಟ್ಟಿನಲ್ಲಿ ಮಾದಕ ದ್ರವ್ಯ ಹೊಗೆಸೊಪ್ಪು ಬೀರ್. ಇವುಗಳ ಕಂದಾಯ ಜಾಸ್ತಿ ಮಾಡುವರು. ನಾಟಕ ಸಿನಿಮಾಗಳಿಗೆ ಪ್ರೇಕ್ಷಕರು ಈಗ ಮಿತಿಮೀರಿ ಹೋಗುತ್ತಿರುವುದರಿಂದ ಅದರ ಮೇಲೂ ಹೆಚ್ಚಿಗೆ ಕಂದಾಯ ಹಾಕುವರು.

ಈಗಿಗ ತಿಂಗಳ ಹಿಂದೆ ಯೋಚಿಸಿದಂತೆ ಅಲ ಈಗ ಜರ್ಮನಿಯ. ಗುಂಡಸು ಸಂಖ್ಯೆ ವಿಪರೀತ ಕಮ್ಮಿಯಾಗಿದೆ. ರಷ್ಯಾದಲ್ಲಿ ಒಹಳ ನಷ್ಟವಾಯಿತು ಒಂದು ಯುಂತ್ರದಲ್ಲಿ ಒಂದು ಕೀಲು ಮುರಿದರೂ ಹಾಗೆ ಭಾರಿ ಯಂತ್ರವು ಪುಡಿಪುಡಿಯಾಗುವುದೋ ಹಾಗೆ ಸದ್ದಿಲ್ಲದೆ ಜರ್ಮನಿಯು ನಾಶವಾಗುವುದು ಎಂದು ಲಾರ್ಡ್ ಹಾಲಿಫಾಕ್ಸರು ಅಮೆರಿಕಾದಲ್ಲಿ ಹೇಳಿರುವರು.

ಕಾಶಿಯ ಗಾಂಧಿ ಆಶ್ರಮವು ನ್ಯಾಯ ಬಾಹಿರ ಸಂಸ್ಥೆಯಾಗಿ ಸರಕಾರ್ಪಟ್ಟ ಪೋಲೀಸಿನವರು ಅದಕ್ಕೆ ಬೀಗಹಾಕಿ ಸೀಲ್‌ಮಾಡಿದ್ದಾರೆ.

ಎಸ್ಸೆನ್ ನೀಲೆ ಮತ್ತೆ ಆರ್. ಎ ಎಫ್. ದಾಳಿ ನಡೆಸಲಾಗಿದೆ ಫ್ರೆಂಚ್ ಕಾರ್ಖಾನೆಯ ಮೇಲೆ ಅಮೆರಿಕಾ ವಿಮಾನ ದಾಳಿ ನಡೆದಿದೆ.

ಹಾಲೆಂಡಿನಲ್ಲಿ ಜರ್ಮನ್ ಮುಖ್ಯ ಸೇನಾಧಿಪತಿಯು ಮಿತ್ರಪಕ್ಷದವರು ಕಡೆಯಲ್ಲಿಯೂ ಇಳಿಯುವ ಸಂಭವ ಇದ್ದಿರುವುದೆಂದರು.

ಈಗ ಕರ್ಕಿ ಮಿಲಿಟರಿ ಗೋಷ್ಠಿಯವರು ಮೆಡಟರೇನಿಯನ್ ಪ್ರದೇಶಗಳಲ್ಲಿ ರಣರಂಗವನ್ನು ನೋಡುತ್ತಿರುವುರಷ್ಟೆ. ಅವರು ತಮ್ಮ ಈ ಪ್ರವಾಸದ ಅನುಭವದಿಂದ ಈಗ ಮಿತ್ರ ಪಕ್ಷದವರಿಗೆ ಯುದ್ಧೋಪಕರಣಗಳು ಆಕ್ಸಿಸ್ ಪಕ್ಷದವರಿಗಿಂತ ಮಿತಿಮೀರಿದೆ ಎಂದೂ ಆಕ್ಸಿಸ್ ರಾಷ್ಟ್ರದವರಿಗೆ ಸೋಲು ನಿಶ್ಚಯವೆಂದೂ ಹೇಳುತ್ತಾರೆ.

ಗಾಂಧಿಜಿ ಮೈಸರಾಯರ ಪತ್ರಸಂವಾದ

ಹೊಸದೆಲ್ಲಿ ಏ. 5—ವೈಸರಾಯರೊಂದಿಗೆ ಮಹಾತ್ಮಾ ಗಾಂಧಿಯವರು ಪತ್ರ ಸಂವಾದ ನಡೆಸುತ್ತಿರುವರೆಂಬ ವಾರ್ತೆಯು ರಾಜಕೀಯ ಸಂಸ್ಥೆಗಳಲ್ಲಿ ಕೆಲವು ದಿವಸಗಳಿಂದ ಹಬ್ಬಿದೆ. ಇವರ ನಿಜಾಂಶ ಇನ್ನು ವ್ಯಕ್ತವಾಗಿಲ್ಲವೆಂದು ಮದರಾಸಿನ ಒಂದು ಪತ್ರಿಕೆ ಬಾತ್ಮೀದಾರರು ತಿಳಿಯಪಡಿಸಿದ್ದಾರೆ.

ಭಾರತದ ಬಿಕ್ಕಟ್ಟಿಗೆ ಗಾಂಧೀಜಿಯವರ ದೂಷಣೆಯು ವಿವೇಕವಲ್ಲ

ಲಂಡನ್ ಏ. 6—ಭಾರತದ ಬಿಕ್ಕಟ್ಟಿನ ವಿಷಯದಲ್ಲಿ ಪೂರ್ಣ ಜವಾಬ್ದಾರಿಯನ್ನು ಮಹಾತ್ಮಾ ಗಾಂಧಿಯವರ ಮೇಲೆ ಹೊರಿಸುವುದು ಬ್ರಿಟಿಷ್ ಸರ್ಕಾರಕ್ಕೆ ನ್ಯಾಯವೂ ಅಥವಾ ವಿವೇಕವೂ ಆದುದೆಂದು ನಾನು ಯೋಚಿಸಲಾರೆ, ಎಂದು ಲಂಡನ್ ಡೈಲಿಹೆರಾಲ್ಡ್‌ನ ನ್ಯೂಸಿನಲ್ಲಿ ಪ್ರೊ|| ಹೆರಾಲ್ಡ್ ಲಾಸ್ಕಿಯವರು ಬರೆದಿದ್ದಾರೆ.

....ಟುನಿಷಿಯಾ! ರಷ್ಯಾ!....

ಹಿಟ್ಲರನು ರಷ್ಯಾವನ್ನು ಅದುಮಲು ಕಡೇ ಪ್ರಯತ್ನ ಮಾಡುವಾಗ, ನಾಜಿ ಸೈನ್ಯವು ಟ್ಯುನಿಷಿಯಾದಿಂದ ವಾಪಸ್ಸಾಗುವ ವಿಷಯದಲ್ಲಿ ಅವನಿಗೆ ಇಚ್ಛೆ ಇರುವುದಿಲ್ಲವೆಂದು ಹೇಳಲಾಗಿದೆ.

ಜಪಾನರನ್ನು ಬರ್ಮಾದಿಂದ ಓಡಿಸಲು!

ಬರ್ಮಾದಿಂದ ಜಪಾನರನ್ನು ಸದೆಬಡಿದು ಓಡಿಸಲು ತಕ್ಕ ದಳ ಭೂಮಿಯ ಮೇಲೂ, ನೀರಿನ ಮೇಲೂ ಆಕಾಶದ ಮೇಲೂ, ತಂದ ವಿನಃ ಗೆಲ್ಲಲು ಆಗುವುದಿಲ್ಲ 1944 ಕ್ಕಿಂತ ಮುಂಚಿತವಾಗಿ ಬರ್ಮಾ ರಸ್ತೆಯನ್ನು ತೆಗೆಯಲು ಆಗುವುದಿಲ್ಲ. ಜಪಾನರು ದಿನೆ ದಿನೆ ಬರ್ಮಾ ಶಕ್ತಿಯನ್ನು ಬಲಪಡಿಸಿಕೊಳ್ಳುತ್ತಿರುವರು—ಹೀಗೆಂದು ಲಂಡನ್ ನ್ಯೂಸ್ ಕ್ರಾನಿಕಲ್ ಬಾತ್ಮೀದಾರರು ಚೈನಾದಿಂದ ತಂತಿ ಕಳುಹಿಸಿರುತ್ತಾರೆ.

ಕಾಂಗ್ರೆಸ್ಸಿನವರೂ—ಅಮೆರಿಯವರೂ

ಬಹು ಮಂದಿ ಕಾಂಗ್ರೆಸ್ ನಾಯಕರನ್ನು ಜೈಲಿನಲ್ಲಿಡಿಸಿರುತ್ತೇನೆಂದೂ ಕಾಂಗ್ರೆಸ್‌ನವರು ದಂಗೆಕಾರರೆಂದೂ, ಇಂಥಾ ದಂಗೆಯನ್ನು ಸದೆಬಡಿದಿರುವೆನೆಂದೂ, ಪ್ರಪಂಚಕ್ಕೆ ಇಂಡಿಯಾ ಬೇರೆ ಕಾಂಗ್ರೆಸ್ಸೇ ಬೇರೆ, ತಾನೊಬ್ಬನೇ ಇಂಡಿಯಾವರ ಆಶೆಗಳನ್ನು ನೋಡಿಕೊಳ್ಳುವ ಪ್ರಾಣಿ ಎಂದು ಮಿ|| ಅಮೆರಿಯವರು ಹೇಳಬಹುದು. ಮಿ| ಅಮೆರಿಯವರೇ ನಿಮಗೆ ತಿಳಿದಿರಲಿ. ಇಂಡಿಯಾದಲ್ಲಿ ಕಾಂಗ್ರೆಸ್ ಸೇರಿದ್ದನ್ನು ಹಿಂದೆಗೆಯುವ ಒಬ್ಬ ವ್ಯಕ್ತಿ ಕಾಂಗ್ರೆಸ್ ನಲ್ಲಾಗಲಿ ಇಲ್ಲವೆ ಹೊರಗೆ ಇರುವವರನ್ನು ತೋರಿಸಬಲ್ಲಿರಾ ? ಇಂಡಿಯನ್ನರು ತಮ್ಮ ಮನೆಯಲ್ಲಿ ತಾವು ಯಜಮಾನರಾಗಿರಬೇಕೆಂದಿರುವರು. ಬ್ರಿಟಿಷ್ ಸರ್ಕಾರವು ಅಧಿಕಾರವನ್ನು ಬಿಡುವುದಿಲ್ಲವಾದ್ದರಿಂದ ಈಗ ಕಾಂಗ್ರೆಸ್ ತೆಗೆದುಕೊಂಡಿರುವ ಕಾಲವು ಸರಿಯಾದದ್ದು ಎಂದು ಸೆಂಟ್ರಲ್ ಅಸೆಂಬ್ಲಿಯಲ್ಲಿ ಬರಾದ ಮಿ| ಅಬ್ದುಲ್ ಕಾಯೂಂ ರವರು ಇಂಡಿಯಾದ ಡಿಬೇಟ್ ವಿಷಯವಾಗಿ ಹೇಳುತ್ತಾರೆ.

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್ ತಯಾರಿಕೆ

ವಾಣಿ ಅಥವಾ VIOLINIST

ಎಂಬ ಕನ್ನಡ ಸಾಮಾಜಿಕ ಚಿತ್ರ

ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ

ಸಂಗೀತರತ್ನ ಟಿ. ಚೌಡಯ್ಯ, ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯ, ಗಾಯನಗಾಂಧರ್ವ ಚಂಪೆ ನೈದ್ಯನಾಥ ಭಾಗವತರ್ ಮೃದಂಗವಿದ್ವಾನ್ ಮಣಿ ಕೋಕಿಲಕಂಠ ಬಳ್ಳಾರಿ ಲಲಿತ, ಚಂದ್ರಮ್ಮ, ರತ್ನ, ಪಂಡರೀಬಾಯಿ, ಧನಭಾಗ್ಯಂ ಎ. ನಾರಾಯಣರಾವ್, ಕೆ. ಎಂ. ಮಹದೇವ್, ಮಾಸ್ಟರ್ ಬಿ. ನಿ. ಕೆ. ಮೂರ್ತಿ ಬಿ. ಎಕ್. ಸುಬ್ಬಯ್ಯ, ಎಂ. ಮಾಧವರಾವ್, ಎ. ಸುಬ್ಬಣ್ಣ, ಎಂ. ಆರ್. ಪಿ. ಸಾರಥಿ ಶ್ರೀಮತಿ ಕೆ. ಲಂ, ಶಾ. ತಿರಾಜಮ್ಮ. ಮುಂತಾದವರು ತಾರಾಗಣದಲ್ಲಿದ್ದಾರೆ.

ನಿಮ್ಮ ಊರಿನ ಮೆಚ್ಚಿನ ಚಿತ್ರ ಮಂದಿರಗಳಲ್ಲಿ

ಎ ದು ರು ನೋ ಡಿ

ನಿರ್ದೇಶಕರು— ಜಿ ಆರ್. ರಾಮಯ್ಯನವರು

ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ ಚೌಡಯ್ಯನವರು

ತಯಾರಿಕೆ— ಸಾಹುಕಾರ್ ಟಿ ಎನ್. ಶಿವಬಸವಸ್ವಾಮಿ

ಕಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಕ್ ಗೋಪಾಲ್.

ಸ್ಟೂಡಿಯೋ—ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್, ಕೊಯಂಬತ್ತೂರು.

ಮಗುವನ್ನು ಆನಂದವಾಗಿಡಿ, ಅವನಿಗೆ ಕೊಡಿ

ಗ್ರೈಪ್ ಸಿರಪ್

ವ್ಯಾಪಾರದ ITL ಗುರುತು

ಮಕ್ಕಳಿಗೆ ಆದರ್ಶ ಔಷಧಿ

ಆಹಾರದ ತೊಂದರೆ, ಹೊಟ್ಟೆ ಹಿಡಿತ, ಹೆಲ್ಲು ಬರುವಾಗ ಆಗುವ ತೊಂದರೆ ಇತ್ಯಾದಿಗಳನ್ನು ನಿವಾರಿಸುತ್ತದೆ.

ಸೇವಿಸಲು ರುಚಿಕರ

ಮತ್ತು ಬರುವ ಮೂಲಿಕೆಗಳ ವಿಶ್ರಣವಿಲ್ಲ

ಫ್ರೇಮಕರ ಮತ್ತು ಗುಣಕಾರಿ

— ತಯಾರಿಕರು —

ಗೌರ್ನಮೆಂಟ್ ಇಂಡಸ್ಟ್ರಿಯಲ್ ಆಂಡ್ ಟೆಸ್ಟಿಂಗ್ ಲೆಬೊರೇಟರಿ

ಮಲ್ಲೇಶ್ವರಂ, ಬಂಗಳೂರು.

ಹಾಲು ಪಾನೀಯಗಳು

——— ನಮ್ಮಲ್ಲಿ ಒಂದು ವಿಶೇಷವೇ ಸರಿ

ಕೆನೆ, ಬೆಣ್ಣೆ, ಆತಿ ಮಧುರವಾದ ಕ್ರೀಮ್, ಇವುಗಳಿಗೆ

ಈ ಕೆಳಗಿನ ಅಡ್ರೆಸ್ಸಿಗೆ ಈ ದಿನವೇ ಫೋನ್ ಮಾಡಿ

ಸಿಟಿಸನ್ನಡ್ಡೈರಿ ಟೆಲಿಫೋನ್ ನಂಬರು 492

ಹಳೇ ಪೋಸ್ಟಾಫೀಸ್‌ರಸ್ತೆ, ಮೈಸೂರು

ಉತ್ಕೃಷ್ಟವಾದ ಹಿಂಗು



ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ಊಟವು ರುಚಿಕರವಾಗಿದ್ದು ಸಂಪೂರ್ಣ ಆರೋಗ್ಯವೂ ಸೌಖ್ಯವೂ ದೊರೆಯಲು

TG ಮಾರ್ಕಿನ ಹಿಂಗನ್ನು

ಉಪಯೋಗಿಸಿ.

ಇದನ್ನು ನೀವು ಒಂದು ಸಾರಿ ಉಪಯೋಗಿಸಿದರೆ, ನಂತರ ಬೇರೆ ಯಾವುದನ್ನೂ ಉಪಯೋಗಿಸುವುದಿಲ್ಲ.

ಒಂದ, ಅರ್ಧ, ಕಾಲು ಪೌಂಡಿನ, ಒಂದು ಸೇರು ಒಂದು ಪಲಮ್ ಪ್ಯಾಕೆಟ್‌ಗಳಲ್ಲಿ ಎಲ್ಲಾ ಪ್ರಮುಖ ವ್ಯಾಪಾರಸ್ಥಲಗಳಲ್ಲೂ ದೊರೆಯುತ್ತದೆ.

ನಮ್ಮ ಪರಿಮಳ ಆಡಿಕೆ ಪುಡಿಯು ಸುಪ್ರಸಿದ್ಧವಾದುದು.

ವಲ್ಲಭದಾಸ್ ತೇಜ್‌ಪಾಲ್

೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಮದರಾಸು.

Cpera ಎನೆ ಆಮೋಘ ವಾರ Manonmani

ಅಪೇರಾ 2-4-43 ರಿಂದ

ಮನೋನ್ಮಣಿ

ಪಿ.ಯು. ಚಿನ್ನಪ್ಪ, ಟಿ.ಆರ್. ರಾಜಕುಮಾರಿ, ಶ್ಯಾಮು, ಮಹಾಲಿಂಗಂ, ಕೆ.ಕೆ. ಪೆರುಮಾಳ್, ಎನ್. ಎಸ್. ಕೃಷ್ಣನ್ ಟಿ.ಎ. ಮಧುರಂ, ಕಾಳಿ ಎನ್. ರತ್ನಂ, ಮುಂತಾದವರು ಪಾತ್ರ ವಹಿಸಿರುವರು.

ಬೆಂಗಳೂರಿನಲ್ಲಿ .... 12 ವಾರ ನಡೆಯಿತು

ಮದರಾಸಿನಲ್ಲಿ .... ಮಧುರೆಯಲ್ಲಿ

22 ನೇ ವಾರ ನಡೆಯುತ್ತಿದೆ

Ready Made! ರೆಡಿ ಮೇಡ್!

ಉಗಾದಿ ಹಬ್ಬಕ್ಕಾಗಿ ಸ್ಪೆಷಲ್ ಸೆಲೆಕ್ಷನ್!

ಹಬ್ಬಕ್ಕೆ ಡ್ರೆಸ್ ಬೇಕಲ್ಲವೆ!

ಬಟ್ಟೆಯನ್ನು ಕೊಂಡು ಕೊಂಡು, ಕತ್ತರಿಸಿ ಹೊಲಿಸುವ ತೊಂದರೆ ತಪ್ಪಿಸಿದ್ದೇವೆ.

— ಒಂದು ಪರೀಕ್ಷಿಸಿರಿ —

ಜಿ. ವಿ. ಸೂರ್ಯನಾರಾಯಣ ಶೆಟ್ಟಿ ಅಂಡ್ ಸನ್ಸ್,

ಜ್ಯುಯಲರ್ಸ್ ಅಂಡ್ ರೆಡಿಮೇಡ್ ಡ್ರೆಸ್ ಎಂಪೋರಿಯಂ

ಸಯ್ಯಾಜಿರಾವ್ ರೋಡ್, ಮೈಸೂರು.

ಎಲ್ಲಾ ವಿಧವಾದ ಜವಾಹಿರಿ ನಗಗಳಿಗೂ ಸಂಬಂಧಿಸಿದ ಅಂಗಡಿ.

Edited, Printed & pnblished by M. S. Krishna Rao, at the Satyavadi Press. Chamaraj Agrahar, Mysore.

ಮೈಸೂರು ವೈದ್ಯ ಪತ್ರಿಕೆ

ಈ ಉತ್ತಮ ಸಚಿತ್ರ ಕನ್ನಡ-ತೆಲಗು

ಮಾಸಪತ್ರಿಕೆಗೆ

ಚಂದಾದಾರರಾಗಿರಿ

ವಾರ್ಷಿಕ ಚಂದಾ ರೂ. 2-4-0

ಬಿಡಿ ಪ್ರತಿ 4 ಆಣೆ.

ಕಾರ್ಯಾಲಯ ;

ಶ್ರೀ ವಾಸವಾಂಬ ಭವನ

ಅಶೋಕ ರಸ್ತೆ ಮೈಸೂರು

ಪಿ. ಮಂಜಪ್ಪ ಎಂಡ್ ಕಂಪನಿ

ಮಂಗಳೂರು ಗಣಪತಿ, ಸುವರ್ಣಾ ಗಜಾನನ ಬ್ರಾಂಡಿಗಳನ್ನೆ ಉಪಯೋಗಿಸಿ.

ಹಳೇ ಅಗ್ರಹಾರ, ಮೈಸೂರು.

For good printing

Saraswati Printing Press

Lansdowne Buildings, Mysore

Lakshminarasimha Press

Srirampet, Mysore